3.00 P.M.

ANNOUNCEMENT

MR. SPEAKER.—Now there is an announcement. I have nominated Smt. Shakuntala Chougule to the panel of chairman in the vacancy caused consequent on the appointment of Dr. Pushpavati as Minister.

ಶ್ರೀ ಎಂ. ಎಸ್. ಕೃಷ್ಣನ್.—ಬೆಳಿಗ್ಗೆ ಮಾತನಾಡುತ್ತಿದ್ದಾಗ ಮಧ್ಯಾಹ್ನ ಆಟೋರಿಕ್ಷಾ ಸ್ಟ್ರೈಕ್ ಬಗ್ಗೆ ಮಾನ್ಯ ಸಾರಿಗೆ ಮಂತ್ರಿಗಳಿಂದ ಸ್ಟೇಟ್‌ಮೆಂಟ್ ಕೊಡಿಸಲಾಗುವುದು ಎಂಬುದಾಗಿ ಹೇಳಿದ್ದೀರಿ. ಈಗ ಸಾರಿಗೆ ಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರೂ ಇದ್ದಾರೆ. ಆ ಬಗ್ಗೆ ಅವರು ಹೇಳಿಕೆಯನ್ನು ಕೊಡಬೇಕು. ಅವರ ಸಮಸ್ಯೆ ಏನು ಇದೆ, ಅದನ್ನು ಇತ್ಯರ್ಥ ಮಾಡುವ ರೀತಿಯಲ್ಲಿ ವ್ಯವಸ್ಥೆ ಮಾಡಬೇಕೆಂದು ತಮ್ಮ ಮೂಲಕ ಅವರನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಪಂಪಾಪತಿ.—ಮುಷ್ಕರ ನಿಲ್ಲಿಸಬೇಕಾದರೆ ಸ್ಟೇಟ್‌ಮೆಂಟ್‌ನ್ನು ಕೊಡಬೇಕು.

ಸಚಿವರ ಹೇಳಿಕೆ

ಬೆಂಗಳೂರಿನಲ್ಲಿ ಆಟೋರಿಕ್ಷಾ ದರವನ್ನು ಪರಿಷ್ಕರಿಸುವ ಬಗ್ಗೆ

ಶ್ರೀ ಸಿದ್ದರಾಮಯ್ಯ:— ನಿನ್ನೆ ಕೂಡ ಪಿಳಿಕರ ಕೆಳಿಗೆ ಸರ್ಕಾರದ ಗಮನವನ್ನು ಮಾನ್ಯ ಸದಸ್ಯರು ಸೆಳೆದಿದ್ದರೂ ಆಗಲೂ ಸ್ಟೇಟ್‌ಮೆಂಟ್‌ನ್ನು ಕೊಟ್ಟಿದ್ದೆ. ಈಗಲೂ ಆ ಬಗ್ಗೆ ಸ್ಟೇಟ್‌ಮೆಂಟನ್ನು ಮಾಡುತ್ತೇನೆ.

ಆಟೋರಿಕ್ಷಾಗಳ ಪ್ರಯಾಣದರ ಮತ್ತು ಸರಕು ಸಾಗಾಣಿ ದರವನ್ನು ಕಳೆದ ಬಾರಿ ೨೬–೩–೮೫ ರಿಂದ ಸರ್ಕಾರಿ ಆದೇಶ ಕ್ರಮಾಂಕ ಎಫ್ ಟಿ ಡಿ ೫೬ ಟಿ ಟಿ ಎಂ ಎ ೮೫ ರಂತೆ ಪರಿಷ್ಕರಣೆ ಮಾಡಲಾಗಿತ್ತು. ೧೯೮೮ರಲ್ಲಿ ಪೆಟ್ರೋಲ್ ಹಾಗೂ ಆಯಿಲ್ ದರಗಳ ಹೆಚ್ಚಳದಿಂದಾಗಿ ಆಟೋ ರಿಕ್ಷಾಗಳ ನಿರ್ವಹಣಾ ವೆಚ್ಚದಲ್ಲಿ ಪ್ರತಿ ಕಿ. ಮೀ. ಗೆ ೭ ಪೈಸೆಗಳಷ್ಟು ಹೆಚ್ಚಾಗಿದೆ ಎಂಬುದಾಗಿ ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಈ ಬಗ್ಗೆ ಆಟೋರಿಕ್ಷಾಗಳ ಚಾಲಕರಿಂದ ಹಾಗೂ ಮಾಲೀಕರಿಂದ ದರ ಪರಿಷ್ಕರಿಸುವ ಬಗ್ಗೆ ಮನವಿಗಳು ಬಂದಿದ್ದಲ್ಲದೆ ಪ್ರಯಾಣಿಕರಿಂದಲೂ ಸಹ ಆಟೋರಿಕ್ಷಾದವರು ಹೆಚ್ಚಿನ ದರಗಳನ್ನು ವಸೂಲು ಮಾಡುತ್ತಿದ್ದಾರೆಂದು ದೂರುಗಳು ಬಂದಿದ್ದವು. ಇವೆಲ್ಲವನ್ನು ಪರಿಗಣನೆಗೆ ತೆಗೆದುಕೊಂಡು ಸರ್ಕಾರವು ಮೋಟಾರು ವಾಹನ ಕಾಯಿದೆಯ ವಿಧಿಯ ಅನ್ವಯ ದರ ಪರಿಷ್ಕರಣೆ ಮಾಡಲು ಬಾಕಿ ಇದ್ದಂತೆ ರಾಜ್ಯ ಸಾರಿಗೆ ಪ್ರಾಧಿಕಾರವು ಎಲ್ಲಾ ಆಟೋರಿಕ್ಷಾಗಳ ಯೂನಿಯನ್‌ಗಳಿಗೆ ಹಾಗೂ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ಸೂಚನೆ ನೀಡಿ ಪ್ರತಿ ಕಿ. ಮೀ. ಗೆ ೭ ಪೈಸೆಯನ್ನು ತಾತ್ಕಾಲಿಕವಾಗಿ ಹೆಚ್ಚಾಗಿ ವಸೂಲು ಮಾಡಲು ಅನುಮತಿ ನೀಡಿದೆ. ಆಟೋರಿಕ್ಷಾ ಚಾಲಕರ, ಮಾಲೀಕರ ಹಾಗೂ ಸಾರ್ವಜನಿಕರ ಮನವಿಗಳನ್ನು ಸರ್ಕಾರವು ಗಣನೆಗೆ ತೆಗೆದುಕೊಂಡು ಆಟೋ ದರವನ್ನು ಪರಿಷ್ಕರಿಸಲು ಕರಡು ಅಧಿಸೂಚನೆಯನ್ನು ದಿನಾಂಕ ೩೦–೭–೮೮ ರಂದು ಎಫ್‌ಟಿಡಿ ೧೦೫ ಟಿಟಿಎಂಎ ೮೮ರ ಅಧಿಸೂಚನೆ ಪ್ರಕಾರ ರಾಜ್ಯ ಪತ್ರದಲ್ಲಿ ಪ್ರಕಟಣೆ ಮಾಡಿ, ಇದಕ್ಕೆ ಸಂಬಂಧಪಟ್ಟವರಿಂದ ಆಕ್ಷೇಪಣೆಗಳನ್ನು ಆಹ್ವಾನಿಸಿತು. ಈ ಕರಡು ಅಧಿಸೂಚನೆಗೆ ಅನುಗುಣವಾಗಿ ಆಟೋರಿಕ್ಷಾ ಚಾಲಕರು, ಮಾಲೀಕರು ಹಾಗೂ ಪ್ರಯಾಣಿಕರು ನೀಡಿದ ಲಿಖಿತ ಆಕ್ಷೇಪಣೆಗಳನ್ನು ಪರಿಶೀಲಿಸಿ ದಿನಾಂಕ ೧೪–೧೧–೮೮ ಹಾಗೂ ೨೯–೧೨–೮೮ರಂದು ಸರ್ಕಾರವು ಎಲ್ಲರ ಅಹವಾಲುಗಳನ್ನು ಕೇಳಿದೆ. ಇದಲ್ಲದೆ ನೆರೆರಾಜ್ಯಗಳಲ್ಲಿರುವ ಆಟೋದರ ವಿವರಗಳನ್ನು ಸಹ ತರಿಸಿಕೊಂಡು ಪರಿಶೀಲಿಸಿತು. ಆಟೋರಿಕ್ಷಾ ಚಾಲಕರ/ಮಾಲೀಕರ ಸಾರ್ವಜನಿಕ ಪ್ರಯಾಣಿಕ ಸಂಘ–ಸಂಸ್ಥೆಗಳ ಎಲ್ಲಾ ಮನವಿಗಳನ್ನು ಸರ್ಕಾರ ಪರಿಶೀಲನೆ ಮಾಡಿ ಅಂತಿಮ ನಿರ್ಧಾರವನ್ನು ತೆಗೆದುಕೊಳ್ಳುವ ಘಟ್ಟದಲ್ಲಿದೆ. ಮೋಟಾರು ವಾಹನ ಕಾಯಿದೆಯ ವಿಧಿಗಳನ್ನು ಅನುಸರಿಸಬೇಕಾಗಿರುವುದರಿಂದ ಅವುಗಳನ್ನು ಅನುಸರಿಸಿ ಹೊಸ ಪರಿಷ್ಕೃತ ದರಗಳನ್ನು ೧–೪–೮೯ ರಿಂದ ಜಾರಿಗೆ ತರಲು ಅವಶ್ಯ ವಿರುವ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಲಾಗಿತ್ತು.

ಶ್ರೀ ಎಂ. ಎಸ್. ಕೃಷ್ಣನ್.—ಮಂತ್ರಿಗಳು ಹೇಳಿರುವ ರೀತಿಯನ್ನು ನೋಡಿದರೆ ೧–೪–೮೯ ರಿಂದ ಜಾರಿಗೆ ತೆಗೆದುಕೊಂಡಂತೆ ಬರುತ್ತೇವೆಂದು ಹೇಳಿದ್ದಾರೆ. ಆ ಪ್ರಶ್ನೆಯನ್ನು ಯಾವ ರೀತಿಯಲ್ಲಿ

ತೆಗೆದುಕೊಂಡು ಬರುತ್ತಾರೆಂಬುದು ಬಹಳ ಮುಖ್ಯ ಯಾವ ಆಧಾರದ ಮೇಲೆ ತೆಗೆದುಕೊಂಡು ಬರುತ್ತೀರಿ ಎಂಬುದರ ಬಗ್ಗೆ ಏನಾದರೂ ಇಂಡಿಕೇಷನ್ ಕೊಟ್ಟರೆ ಅವರು ಮುಷ್ಕರವನ್ನು ನಿಲ್ಲಿಸ ಬಹುದು. ಅದನ್ನು ಬಿಟ್ಟು ಜಾರಿಗೆ ತೆಗೆದುಕೊಂಡು ಬರುತ್ತೇವೆಂಬುದಾಗಿ ಈ ಮೊದಲೇ ಹೇಳಿ ದ್ದಾರೆ. ಇದರಿಂದ ಸಮಸ್ಯೆ ಇತ್ಯರ್ಥವಾಗುವುದಿಲ್ಲ. ಪ್ರಶ್ನೆಯನ್ನು ಎತ್ತಿದಾಗ ಸ್ಪಷ್ಟವಾಗಿ ಹೇಳಿಕೆ ಯನ್ನು ಕೊಡಬೇಕಾಗಿತ್ತದೆ. ಏಪ್ರಿಲ್ ೧ ಮಾಡುತ್ತೀರಿ ? ಯಾವ ರೀತಿ ಮಾಡುತ್ತೀರಿ ಎಂಬುದರ ಇಂಡಿಕೇಷನ್‌ನ್ನು ಕೊಟ್ಟರೆ ಸ್ವಲ್ಪ ಅನುಕೂಲವಾಗಬಹುದು.

† ಶ್ರೀ ಪಂಪಾಪತಿ. (ದಾವಣಗೆರೆ)—ಅಧ್ಯಕ್ಷರೇ, ಸಾರ್ವಜನಿಕರಿಗೆ ತೊಂದರೆ ಆದಾಗ ಕಾಯ್ದೆ ಕಾನೂನನ್ನು ಸ್ವಲ್ಪ ಹಿಂದೆ ಮಾಡಿ ಆದಷ್ಟು ಜಾಗ್ರತೆ ಆ ಜನರನ್ನು ಕರೆಯಿಸಿ ಮಾತನಾಡಿ ಇತ್ಯರ್ಥ ಮಾಡಬೇಕಾದುದು ಈ ಸರ್ಕಾರದ ಕರ್ತವ್ಯ ಎಂದು ನಾನು ತಿಳಿದು ಕೊಂಡಿದ್ದೇನೆ. ಇವತ್ತು ಸುಮಾರು ೨೦ ಸಾವಿರ ಜನ ಆಟೋಚಾಲಕರು ಹಾಗೂ ಇತರರು ಮುಷ್ಕರ ಹೂಡಿದ್ದಾರೆ. ಇದೇ ಬೆಂಗಳೂರು ಮಹಾನಗರಕ್ಕೆ ಒಂದು ದಿವಸಕ್ಕೆ ೫ ಲಕ್ಷ ಜನ ಬಂದು ಹೋಗುತ್ತಾರೆ. ಈ ಮುಷ್ಕರ ದಿಂದ ಈ ಪಾಂದಿಗಷ್ಟೇ ಅಲ್ಲ. ಬೆಂಗಳೂರಿನ ಜನತೆಗೂ ಕೂಡಾ ತೊಂದರೆಯಾಗಿದೆ. ಇಷ್ಟೆಲ್ಲಾ ತೊಂದರೆಯಾಗಿದ್ದು. ಇಲ್ಲಿ ಸದನ ಕೂಡಾ ನಡೆಯುತ್ತಿದೆ. ಸಂಬಂಧಪಟ್ಟ ಮಂತ್ರಿಗಳೂ ಇಲ್ಲಿ ಇದ್ದಾರೆ. ಎಲ್ಲರೂ ಇರತಕ್ಕ ಸಂದರ್ಭದಲ್ಲಿ ಈ ರೀತಿಯಾದರೆ ಹೇಗೆ ? ಅವರನ್ನು ತಕ್ಷಣವೇ ಕರೆಸಿ ಮಾತನಾಡಿ. ಸಮಸ್ಯೆಯನ್ನು ಇತ್ಯರ್ಥ ಮಾಡಿ ಮುಷ್ಕರವನ್ನು ನಿಲ್ಲಿಸುವುದಕ್ಕೆ ಆಗುವುದಿಲ್ಲವೇ ? ತಮ್ಮ ಹೇಳಿಕೆ ಪ್ರಕಾರ ನೋಡುವುದಾದರೆ ೧ನೇ ತಾರೀಖಿನವರೆಗೆ ಅವರ ಮುಷ್ಕರ ಮುಂದುವರಿಯಬೇಕೇ ? ಅದು ಬಹಳ ದಿವಸವಾಗುತ್ತದೆ. ಮುಷ್ಕರವನ್ನು ಸರ್ಕಾರ ತಾತ್ಸಾರ ಮಾಡಬಾರದು. ಆ ಜನರು ತಮ್ಮ ಮನಸ್ಸಿನ ತೊಂದರೆಯನ್ನು ತೋರ್ಪಡಿಸಿಕೊಳ್ಳುವುದಕ್ಕೋಸ್ಕರ ಈ ಮುಷ್ಕರವನ್ನು ಮಾಡುತ್ತಿದ್ದಾರೆಯೇ ಹೊರತು ಬೇರೆ ಯಾವ ಕಾರಣಕ್ಕೂ ಅಲ್ಲ. ದಯಮಾಡಿ ಮಂತ್ರಿಗಳು ಅವರನ್ನು ಕರೆಸಿ ಮಾತನಾಡಿ ಮುಷ್ಕರ ಹಿಂತೆಗೆಯುವಂತೆ ಮಾಡುವ ಬಗ್ಗೆ ತೀರ್ಮಾನ ಮಾಡಬೇಕೆಂದು ಮತ್ತು ಜನರಿಗೆ ಅನುಕೂಲ ಮಾಡಿಕೊಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಸಿದ್ದರಾಮಯ್ಯ —ಮಾನ್ಯ ಅಧ್ಯಕ್ಷರೇ, ಯಾವುದೇ, ಒಂದು ದರವನ್ನು ನಿಗದಿ ಮಾಡ ಬೇಕಾದರೆ, ಪೊಲೀಸರು, ಚಾಲಕರು ಹಾಗೂ ಸಾರ್ವಜನಿಕರು ಈ ಎಲ್ಲರ ಹಿತವನ್ನು ನಾವು ನೋಡ ಬೇಕಾಗುತ್ತದೆ. ಬೇರೆ ರಾಜ್ಯಗಳಲ್ಲೂ ಕೂಡಾ ದರ ಹೇಗಿದೆ ಎಂಬುದನ್ನು ನೋಡಬೇಕಾಗುತ್ತದೆ. ಆಟೋ ಚಾಲಕರ ಜೊತೆ ೨ ಸಭೆಗಳನ್ನು ಕೂಡಾ ಕಳೆದ ಡಿಸೆಂಬರ್ ೧೪ ಹಾಗೂ ೨೯ ರಂದು ನಡೆಸಿದ್ದೇವೆ ಮತ್ತೆ ತಾತ್ಕಾಲಿಕ ದರವನ್ನು ಕೂಡಾ ಕಿ. ಮೀ. ಗೆ ೭ ಪೈಸೆಯಂತೆ ವಸೂಲಿ ಮಾಡಬಹುದೆಂದು ನಿಗದಿ ಮಾಡಿದ್ದೇವೆ. ಅವರ ಜೊತೆ ಚರ್ಚೆ ಮಾಡಿದ ಮೇಲೆ, ಅವರ ವಾದ ಕೇಳಿದ ಮೇಲೆ ಒಂದು ಪರಿಷ್ಕೃತ ದರ ನಿಗದಿ ಮಾಡುವುದಕ್ಕೆ ಕೆಲವು ಕಾನೂನುಗಳನ್ನು ನೋಡಬೇಕಾಗುತ್ತದೆ. ಕಾನೂನು ರೀತ್ಯ ದರ ನಿಗದಿ ಮಾಡಬೇಕಾಗುತ್ತದೆ. ಇದಲ್ಲದೇ ಇವರ ಮುಖಂಡರ ಜೊತೆ ೨೦ನೇ ತಾರೀಖು ಚರ್ಚೆ ಮಾಡಿದ್ದೇನೆ. ೧ನೇ ತಾರೀಖು ಜಾರಿಗೆ ಕೊಡುವ ರೀತಿಯಲ್ಲಿ.....

ಶ್ರೀ ಎಂ. ಎಸ್. ಕೃಷ್ಣನ್. —ತಾವು ಹಿಂದೆ ೨೯–೧೨–೮೮ರಲ್ಲಿ ಅವರ ಪ್ರತಿನಿಧಿಗಳ ಜೊತೆ ಮಾತ ನಾಡಿದಾಗ ಏನು ಭರವಸೆಯನ್ನು ಕೊಟ್ಟಿರಿ ? ಅದರಂತೆ ತಾವು ನಡೆದುಕೊಂಡಿದ್ದರೆ ಅವರು ಮುಷ್ಕರಕ್ಕೆ ಹೋಗುತ್ತಿರಲಿಲ್ಲ.

ಶ್ರೀ ಸಿದ್ದರಾಮಯ್ಯ.—ಎಲ್ಲವನ್ನೂ ಇತ್ಯರ್ಥ ಮಾಡಿ ತೀರ್ಮಾನ ಮಾಡುತ್ತೇವೆ ಎಂದು ಹೇಳಿದ್ದುದು ನಿಜ, ಆದರೆ ಬೇರೆ ರಾಜ್ಯಗಳಲ್ಲಿ ಎಷ್ಟು ದರ ಇದೆ ಎಂಬುದನ್ನು ತರಿಸುವುದರಲ್ಲಿ ಸ್ವಲ್ಪ ನಿಧಾನವಾಗಿದೆ. ನಿನ್ನೆಯೂ ಕೂಡ ಅವರ ಮುಖಂಡರ ಜೊತೆ ಮಾತನಾಡಿ ಸ್ಪಷ್ಟವಾಗಿ ಹೇಳಿದ್ದೇನೆ. ಇಪತ್ತು ಕೂಡಾ ಇದನ್ನೇ ಹೇಳುತ್ತಿದ್ದೇನೆ. ಏಪ್ರಿಲ್ ೧ನೇ ತಾರೀಖಿನಿಂದ ಪರಿಷ್ಕೃತ ದರ ಜಾರಿಗೆ ಬರುತ್ತದೆ. ಅವರು ಚಳುವಳಿಯನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಈಗಲೂ ಕೂಡಾ ಮನವಿ ಮಾಡುತ್ತಿದ್ದೇನೆ. ಈಗಾಗಲೇ ಬೇರೆ ಸಂಘದವರು ಕೂಡಾ ಬಂದಿದ್ದರು. ಅವರ ಜೊತೆ ಚರ್ಚೆ ಮಾಡಿದ್ದೇನೆ. ನಾರಾಯಣಕುಮಾರ್ ಹಾಗೂ ಮತ್ತಿತರ ಸಂಘದವರು ಬಂದಿದ್ದರು. ಅವರಿಗೂ ಕೂಡಾ ಇದನ್ನೇ ಹೇಳಿದ್ದೇನೆ. ಹೊಸ ದರ ಏಪ್ರಿಲ್ ೧ ರಿಂದ ಜಾರಿಗೆ ಬರುತ್ತದೆ. ಅವರು ಮಿನಿಮಮ್ ದರ ೨–೫ರಿಕ್ಕೆ ನಿಗದಿ ಮಾಡಬೇಕೆಂದು ಪ್ರತಿ ಕಿ. ಮೀ. ಗೆ ೧.೫೦ ಕೊಡಬೇಕೆಂದು

† ಈ ಚಿಹ್ನೆಯಲ್ಲಿ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಹೇಳುತ್ತಿದ್ದಾರೆ. ಮತ್ತೆ ಸಾರ್ವಜನಿಕರು ಸಹಾ ತಮ್ಮ ಒಂದು ಅಭಿಪ್ರಾಯವನ್ನು ವ್ಯಕ್ತ ಪಡಿಸಿದ್ದಾರೆ. ಏಪ್ರಿಲ್ ೧೫ನೇ ತಾರೀಖಿಗೆ ಒಂದು ದರವನ್ನು ನಿಗದಿ ಮಾಡಿ ಹೆಚ್ಚು ಕಡಿಮೆ

ಅವರು ಕೇಳಿರತಕ್ಕ ದರವನ್ನು ಸಹಾನುಭೂತಿಯಿಂದ ಪರಿಗಣನೆ ಮಾಡಿ ಒಂದು ದರವನ್ನು ನಿಗಧಿ ಮಾಡಿ ಕೊಡುತ್ತೇವೆಂದು ಈ ಸಭೆಯಲ್ಲಿ ಹೇಳುತ್ತೇನೆ. ದಯವಿಟ್ಟು ಯಾರು ಮುಷ್ಕರ ಮಾಡುತ್ತಿದ್ದಾರೆ ಅವರು ಮುಷ್ಕರವನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ವಿತ್ತೀಯ ಕಾರ್ಯಕಲಾಪಗಳು ೧೯೮೬–೮೦ನೇ ಸಾಲಿನ ಆಯವ್ಯಯದ ಮೇಲೆ ಸಾಮಾನ್ಯ ಚರ್ಚೆ.

† ಶ್ರೀ ಜಿ. ಬಸವಣ್ಣಪ್ಪ (ಹೊಳಹೊನ್ನೂರು).—ಮಾನ್ಯ ಅಧ್ಯಕ್ಷರೇ, ೧೯೮೯–೯೦ನೇ ಸಾಲಿನಲ್ಲಿ ಈ ಕಷ್ಟ ಕಾಲದಲ್ಲಿ ಪರಿಣಾಮಕಾರಿಯಾದ ವಾಸ್ತವಾಂಶಗಳಿಂದ ಕೂಡಿರತಕ್ಕ ಬಜೆಟ್‌ನ್ನು ಮಾನ್ಯ ಮುಖ್ಯ ಮಂತ್ರಿಗಳು ಮಂಡಿಸಿದ್ದಾರೆ ಅದಕ್ಕಾಗಿ ನಾನು ಅವರನ್ನು ಸ್ವಾಗತ ಮಾಡುತ್ತೇನೆ.

(ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಮಾನ್ಯ ಮುಖ್ಯಮಂತ್ರಿಗಳು ಈವೊಂದು ಬಜೆಟ್‌ನ್ನು ಮಂಡನೆ ಮಾಡುವಾಗ ಜನತಾದಳ ಸದಸ್ಯತ್ವದ ಬಗ್ಗೆ ಪ್ರಸ್ತಾಪಿಸಿದ್ದಾರೆ, ಅದಕ್ಕಾಗಿ ಜನತೆಗೆ ಕೃತಜ್ಞತೆಗಳನ್ನು ಸಲ್ಲಿಸಿದ್ದಾರೆ. ಜನರಿಗೆ ಕೃತಜ್ಞತೆಗಳನ್ನು ಸಲ್ಲಿಸಿ ಒಂದು ಸಂಪ್ರದಾಯವನ್ನು ಹಾಕಿದ್ದಾರೆಂದು ನಾನು ಭಾವಿಸುತ್ತೇನೆ. ರಾಜ್ಯದ ಹಣಕಾಸಿನ ಪರಿಸ್ಥಿತಿಯ ಬಗ್ಗೆ ಸವಿಸ್ತಾರವಾಗಿ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಬಜೆಟ್ ಭಾಷಣದಲ್ಲಿ ತಿಳಿಸಿದ್ದಾರೆ. ರಾಜ್ಯದ ಹಣಕಾಸಿನ ಪರಿಸ್ಥಿತಿಯ ಬಗ್ಗೆ ಹಲವಾರು ಹಲವು ರೀತಿಯಲ್ಲಿ ಮಾತನಾಡಿದ್ದಾರೆ ವಿರೋಧಪಕ್ಷದವರು ಮಾತನಾಡುವಾಗ ರಾಜ್ಯದ ಹಣಕಾಸಿನ ಪರಿಸ್ಥಿತಿ ಹದಗೆಟ್ಟಿದೆ, ದಿವಾಳಿ ಎದ್ದಿದೆ ಎನ್ನುವ ರೀತಿಯಲ್ಲಿ ಮಾತನಾಡಿದ್ದಾರೆ. ರಾಜ್ಯದ ಹಣಕಾಸಿನ ಪರಿಸ್ಥಿತಿಯ ಬಗ್ಗೆ ನಾನು ತಿಳಿದಮಟ್ಟಿಗೆ ಕೆಲವೊಂದು ಅಂಕಿಅಂಶಗಳ ಸಮೇತ ಸಭೆಯ ಗಮನಕ್ಕೆ ತರಲಿಚ್ಚಿಸುತ್ತೇನೆ. ತಮಗೆ ತಿಳಿದಹಾಗೆ ಜನತಾ ಸರ್ಕಾರ ೧೦–೧೧–೧೯೮೩ರಲ್ಲಿ ಅಧಿಕಾರಕ್ಕೆ ಬಂತು. ನಾವು ಅಧಿಕಾರಕ್ಕೆ ಬಂದಾಗ ಆಗಿನ ಹಣಕಾಸಿನ ಪರಿಸ್ಥಿತಿ ಯಾವರೀತಿ ಇತ್ತು ಎಂಬುದನ್ನು ಸ್ವಲ್ಪ ಅವಲೋಕಿಸಿದರೆ, ನಮಗೆ ೧೧೦ಕೋಟಿ ರೂಪಾಯಿಗಳ ಭಾರವನ್ನು ಹಿಂದಿನವರು ಬಿಟ್ಟುಹೋಗಿದ್ದಾರೆ. ಓವರ್‌ಡ್ರಾಫ್ಟ್ ಮತ್ತು ಪೆಂಡಿಂಗ್ ಬಿಲ್ಸ್. ೧೯೮೩ರಿಂದ ೧೯೮೬–೮೭ರವರೆಗೆ ಸತತವಾಗಿ ಭೀಕರವಾದ ಬರಗಾಲವನ್ನು ರಾಜ್ಯಸರ್ಕಾರ ಎದುರಿಸಿ ಬರಗಾಲ ಪರಿಸ್ಥಿತಿಯಲ್ಲಿ ಜನಗಳಿಗೆ ಮತ್ತು ಜಾನುವಾರುಗಳಿಗೆ ಬರಪರಿಹಾರ ಇತ್ಯಾದಿ ಕಾರ್ಯಕ್ರಮಗಳಿಗಾಗಿ ೬೫೧ ಕೋಟಿ ರೂಪಾಯಿಗಳನ್ನು ರಾಜ್ಯ ಸರ್ಕಾರ ಖರ್ಚು ಮಾಡಿದೆ. ರಾಜ್ಯ ಸರ್ಕಾರ ತನ್ನದೇ ಆದ ೫೫೧ ಕೋಟಿ ರೂಪಾಯಿಗಳ ಬಂಡವಾಳವನ್ನು ಖರ್ಚು ಮಾಡಿದೆ. ಬಹಳ ಪರಿಣಾಮಕಾರಿಯಾಗಿ ಬರಪರಿಸ್ಥಿತಿಯನ್ನು ಎದುರಿಸಿದೆ. ಕೇಂದ್ರದಿಂದ ದೊರೆತ ೨೦೦ ಕೋಟಿ ರೂಪಾಯಿಗಳು ಅದು ಸಹಾಯವಲ್ಲ. ರಾಜ್ಯದಲ್ಲಿ ಈ ರೀತಿಯ ತೀವ್ರ ಬರಗಾಲವನ್ನು ಎದುರಿಸಿದ್ದರೂ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಯಾವುದೇ ರೀತಿಯಿಂದಲೂ ಕೊರತೆಯನ್ನುಂಟು ಮಾಡಿಲ್ಲ ಎಂದು ಮಾನ್ಯ ಬಸವಲಿಂಗಪ್ಪನವರು ಹೇಳಿದರು ಮತ್ತು ವಿರೋಧಪಕ್ಷದ ನಾಯಕಿಯವರು ಸಹ ಹೇಳಿದರು. ವರ್ಷೇ ವರ್ಷೇ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗಿವೆಯೆಂದೂ ಸಹ ಅವರು ಹೇಳಿದರು.

ಶ್ರೀ ಎಂ. ಎಸ್. ಕೃಷ್ಣನ್.—ಅದನ್ನು ನಾವು ಹೇಳುವುದಿಲ್ಲ, ನಿಮ್ಮ ಎಕಾನಮಿಕ್ ಸರ್ವೆ ಆಫ್ ಕರ್ನಾಟಕ ೧೯೮೯–೯೯ ಏನಿದೆ ಅದು ಹೇಳುತ್ತದೆ.

ಶ್ರೀ ಜಿ. ಬಸವಣ್ಣಪ್ಪ.—ಅದರ ಬಗ್ಗೆ ನಾನು ಹೇಳುತ್ತೇನೆ. ಎಕಾನಮಿಕ್ ಸರ್ವೆ ಆಫ್ ಕರ್ನಾಟಕ ಅದರ ಪುಟ–೬ರಲ್ಲಿ ಏನು ಹೇಳುತ್ತಾರೆಂದರೆ.....

ಶ್ರೀ ಎಂ. ಎಸ್. ಕೃಷ್ಣನ್.—ನಿನ್ನೆ ನಾನು ಅದನ್ನು ಓದಿ ಹೇಳಿದ್ದೇನೆ.

ಶ್ರೀ ಜಿ. ಬಸವಣ್ಣಪ್ಪ.—ಪರ್ ಕ್ಯಾಪಿಟಾ ಡೆವಲಪ್‌ಮೆಂಟ್ ಎಕ್ಸ್‌ಪೆಂಡಿಚರ್‌ನಲ್ಲಿ ೧೯೮೫–೮೬ರಲ್ಲಿ ೪೬೫ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ೧೯೮೬–೮೭ರಲ್ಲಿ ೫೨೪ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ ೧೯೮೭–೮೮ರಲ್ಲಿ ೫೯೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ೧೯೮೮–೮೯ರಲ್ಲಿ ೬೫೩ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಪ್ರತಿ ವರ್ಷ ಅಭಿವೃದ್ಧಿ ಕಾರ್ಯಕ್ರಮಗಳಿಗಾಗಿ ಹಣವನ್ನು ಜಾಸ್ತಿ ಖರ್ಚು ಮಾಡಿದ್ದೇವೆ. ಇದು ಎಕಾನಮಿಕ ಸರ್ವೆ ರಿಪೋರ್ಟ್ ಪ್ರಕಾರ ಗೊತ್ತಾಗುತ್ತದೆ.